# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 433

ಸದಸ್ಯರ ಹೆಸರು : ಡಾ:ಯತೀಂದ್ರ ಎಸ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11.12.2024

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಾನುವಾರು ಗಣತಿಗೆ ಅನುಗುಣವಾಗಿ ಪಶು ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 20ನೇ ಜಾನುವಾರು ಗಣತಿಯ ಪ್ರಕಾರ **13880457** ಜಾನುವಾರು ಘಟಕಗಳು ಇರುತ್ತವೆ.<br><br>ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಪ್ರತಿ **5000** ಜಾನುವಾರು ಘಟಕಗಳಿಗೆ ಕನಿಷ್ಠ **01** ಪಶುವೈದ್ಯಕೀಯ ಸಂಸ್ಥೆ ಇರಬೇಕಾಗಿರುತ್ತದೆ. ಅದಕ್ಕನುಗುಣವಾಗಿ 2776 ಪಶುವೈದ್ಯ ಸಂಸ್ಥೆಗಳು ಇರಬೇಕಾಗಿದ್ದು, ಪ್ರಸ್ತುತ 4252 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.<br>(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ). |
| ಆ) | ರಾಜ್ಯದಲ್ಲಿ ಪ್ರಸ್ತುತ ಮಂಜೂರಾಗಿರುವ ಎಷ್ಟು ಪಶು ಆಸ್ಪತ್ರೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಪಶುಆಸ್ಪತ್ರೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಮಂಜೂರಾಗಿರುವ 4252 ಪಶುವೈದ್ಯ ಸಂಸ್ಥೆಗಳ ಪೈಕಿ 4030 ಪಶುವೈದ್ಯ ಸಂಸ್ಥೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ).<br><br>ಪಶುವೈದ್ಯ ಸಂಸ್ಥೆಗಳ ಕಟ್ಟಡಗಳನ್ನು ನಿರ್ಮಿಸಲು RIDF ಯೋಜನೆಯಡಿ, ಕ್ರಮವಹಿಸಲಾಗುತ್ತಿದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ). |

| | | |
|---|---|---|
| ಇ) | ನಗರೀಕರಣದಿಂದ ನಗರ ಭಾಗಗಳಲ್ಲಿರುವ ಕೆಲವು ಪಶು ಆಸ್ಪತ್ರೆಗಳು ಅಪಸ್ತುತವಾಗಿದ್ದು, ಅಂತಹ ಪಶು ಆಸ್ಪತ್ರೆಗಳನ್ನು ಗುರುತಿಸಲಾಗಿದೆಯೇ ಮತ್ತು ಅವಶ್ಯಕತೆಯಿರುವ ಗ್ರಾಮೀಣ ಭಾಗಗಳಿಗೆ ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | 2023-24ನೇ ಸಾಲಿನಲ್ಲಿ ನಗರೀಕರಣದಿಂದ ನಗರ ಭಾಗಗಳಲ್ಲಿರುವ ಮೈಸೂರು ನಗರದ 02, ಬೆಳಗಾವಿ ನಗರದ-01 ಬೆಂಗಳೂರು ನಗರ ಜಿಲ್ಲೆಯ 28 ಪಶುವೈದ್ಯ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವಶ್ಯವಿರುವ ರಾಜ್ಯದ ವಿವಿಧ ಗ್ರಾಮೀಣ ಭಾಗದ ಪ್ರದೇಶಗಳಿಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ. (ಸರ್ಕಾರದ ಆದೇಶ ಪ್ರತಿಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ) |

**ಇ-ಪಸಂಮೀ 302 ಸಲೆವಿ 2024**

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೇ ಸಚಿವರು

# ಅನುಬಂಧ-1

**ಡಾ: ಯತೀಂದ್ರ ಎಸ್ ವಿಧಾನ ಪರಿಷತ್ ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಪ್ರಶ್ನೆ ಸಂಖ್ಯೆ: 330 (433) ಕ್ಕೆ ಅನುಬಂಧ ಜಿಲ್ಲಾವಾರು 2019ರ 20ನೇ ಜಾನುವಾರು ಗಣತಿ ಹಾಗೂ ಪಶುವೈದ್ಯಕೀಯ ಸಂಸ್ಥೆಗಳ ವಿವರ**

| Sl.No | Name of the district | Total cattle units | No of institutions according to cattle units | Existing No of institutions |
|---|---|---|---|---|
| 1 | Bengaluru Urban | 201520 | 40 | 75 |
| 2 | Bengaluru Rural | 284257 | 57 | 104 |
| 3 | Chitradurga | 532588 | 107 | 157 |
| 4 | Chikkaballapura | 345800 | 69 | 109 |
| 5 | Davanagere | 388604 | 78 | 158 |
| 6 | Kolara | 381672 | 76 | 113 |
| 7 | Ramanagara | 361230 | 72 | 125 |
| 8 | Shimoga | 672344 | 134 | 173 |
| 9 | Tumakuru | 768088 | 154 | 254 |
| 10 | Chamarajanagara | 295173 | 59 | 85 |
| 11 | Chikkamagaluru | 362587 | 73 | 144 |
| 12 | Dakshina Kannada | 283897 | 57 | 112 |
| 13 | Hassan | 714885 | 143 | 220 |
| 14 | Kodagu | 81763 | 16 | 74 |
| 15 | Mysore | 589698 | 118 | 196 |
| 16 | Mandya | 575124 | 115 | 223 |
| 17 | Udupi | 269792 | 54 | 89 |
| 18 | Belgavi | 1575530 | 315 | 280 |
| 19 | Bagalakote | 582149 | 116 | 145 |
| 20 | Dharwad | 264854 | 53 | 114 |
| 21 | Gadag | 258359 | 52 | 88 |
| 22 | Haveri | 398517 | 80 | 151 |
| 23 | Uttara Kannada | 419468 | 84 | 144 |
| 24 | Vijayapur | 479361 | 96 | 143 |
| 25 | Ballari | 251265 | 50 | 57 |
| 26 | Vijayanagar | 430396 | 86 | 96 |
| 27 | Bidar | 339381 | 68 | 117 |
| 28 | Koppala | 417066 | 83 | 85 |
| 29 | Kalaburgi | 527916 | 106 | 215 |
| 30 | Raichur | 459483 | 92 | 107 |
| 31 | Yadagiri | 367692 | 74 | 99 |
| | **Total:** | **13880457** | **2776** | **4252** |

## ಅನುಬಂಧ-2

ಡಾ: ಯತೀಂದ್ರ ಎಸ್ ವಿಧಾನ ಪರಿಷತ್ ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಪ್ರಶ್ನೆ ಸಂಖ್ಯೆ: 330 (433) ಕ್ಕೆ ಅನುಬಂಧ ಜಿಲ್ಲಾವಾರು ಸ್ವಂತ ಕಟ್ಟಡ ಹೊಂದಿರುವ ಪಶುವೈದ್ಯ ಸಂಸ್ಥೆಗಳ ಸಂಖ್ಯೆ

| ಕ್ರ.ಸಂ | ಜಿಲ್ಲೆಯ ಹೆಸರು | ಸ್ವಂತ ಕಟ್ಟಡ ಹೊಂದಿರುವ ಪಶುವೈದ್ಯ ಸಂಸ್ಥೆಗಳ ಸಂಖ್ಯೆ |
|---|---|---|
| 1 | Bengaluru Urban | 64 |
| 2 | Bengaluru Rural | 95 |
| 3 | Chitradurga | 146 |
| 4 | Chikkaballapura | 98 |
| 5 | Davanagere | 155 |
| 6 | Kolara | 107 |
| 7 | Ramanagara | 117 |
| 8 | Shimoga | 170 |
| 9 | Tumakuru | 242 |
| 10 | Chamarajanagara | 81 |
| 11 | Chikkamagaluru | 125 |
| 12 | Dakshina Kannada | 105 |
| 13 | Hassan | 215 |
| 14 | Kodagu | 66 |
| 15 | Mysore | 180 |
| 16 | Mandya | 211 |
| 17 | Udupi | 83 |
| 18 | Belgavi | 261 |
| 19 | Bagalakote | 136 |
| 20 | Dharwad | 111 |
| 21 | Gadag | 83 |
| 22 | Haveri | 144 |
| 23 | Uttara Kannada | 142 |
| 24 | Vijayapur | 141 |
| 25 | Ballari | 54 |
| 26 | Vijayanagar | 94 |
| 27 | Bidar | 112 |
| 28 | Koppala | 78 |
| 29 | Kalaburgi | 213 |
| 30 | Raichur | 106 |
| 31 | Yadagiri | 95 |
| | **Total:** | **4030** |

# ಅನುಬಂಧ-3

**ಡಾ: ಯತೀಂದ್ರ ಎಸ್ ವಿಧಾನ ಪರಿಷತ್ ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಪ್ರಶ್ನೆ ಸಂಖ್ಯೆ: 330 (433) ಕ್ಕೆ ಅನುಬಂಧ ಜಿಲ್ಲಾವಾರು RIDF ಯೋಜನೆಯಡಿ ಮಂಜೂರಾದ ಕಟ್ಟಡಗಳ ವಿವರ**

| ಕ್ರ.ಸಂ | ಜಿಲ್ಲೆಯ ಹೆಸರು | RIDF ಟ್ರ್ಯಾಂಚ್ 28ರಲ್ಲಿ ಮಂಜೂರಾದ ಕಾಮಗಾರಿಗಳ ಸಂಖ್ಯೆ | RIDF ಟ್ರ್ಯಾಂಚ್ 30ರಲ್ಲಿ ಪ್ರಸ್ತಾವಿಸಲಾದ ಕಾಮಗಾರಿಗಳ ಸಂಖ್ಯೆ |
|---|---|---|---|
| 1 | Bengaluru Urban | 03 | 02 |
| 2 | Bengaluru Rural | 0 | 04 |
| 3 | Chitradurga | 0 | 09 |
| 4 | Chikkaballapura | 01 | 04 |
| 5 | Davanagere | 04 | 09 |
| 6 | Kolara | 01 | 04 |
| 7 | Ramanagara | 01 | 07 |
| 8 | Shimoga | 02 | 06 |
| 9 | Tumakuru | 0 | 11 |
| 10 | Chamarajanagara | 02 | 08 |
| 11 | Chikkamagaluru | 01 | 07 |
| 12 | Dakshina Kannada | 03 | 03 |
| 13 | Hassan | 0 | 03 |
| 14 | Kodagu | 01 | 02 |
| 15 | Mysore | 01 | 14 |
| 16 | Mandya | 01 | 12 |
| 17 | Udupi | 0 | 05 |
| 18 | Belgavi | 04 | 15 |
| 19 | Bagalakote | 04 | 05 |
| 20 | Dharwad | 03 | 07 |
| 21 | Gadag | 01 | 06 |
| 22 | Haveri | 02 | 08 |
| 23 | Uttara Kannada | 02 | 05 |
| 24 | Vijayapur | 09 | 07 |
| 25 | Ballari | 01 | 04 |
| 26 | Vijayanagar | 01 | 04 |
| 27 | Bidar | 04 | 07 |
| 28 | Koppala | 01 | 07 |
| 29 | Kalaburgi | 02 | 07 |
| 30 | Raichur | 0 | 04 |
| 31 | Yadagiri | 02 | 04 |
| | **Total:** | **57** | **200** |

ಅನುಬಂಧ-4

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳನ್ನು ಹುದ್ದೆಗಳ ಸಮೇತ ಸ್ಥಳಾಂತರಿಸುವ ಕುರಿತು

**ಓದಲಾಗಿದೆ:-**
1. ಆಯುಕ್ತಾಲಯದ ಇ-ಆಫೀಸ್ ಕಡತ ಸಂಖ್ಯೆ: CAHVS-DEV0VIS/4/2023-DEVCAH-COMM AHVS
2. ಪತ್ರ ಸಂಖ್ಯೆ: ಉನಿಮೈ/ದಾಸ್ತಾನು/ಪವೈಸಂ/ಸ್ಥಳಾಂತರ/ 2022-23 ದಿನಾಂಕ:31.08.2023

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1) ರ ಇ-ಆಫೀಸ್ ಕಡತದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಮೇಲೆ ಓದಲಾದ ಕ್ರ.ಸಂ (2) ರ ಪತ್ರದಲ್ಲಿ ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮೈಸೂರು ಜಿಲ್ಲೆ ಇವರು ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳನ್ನು ಮೈಸೂರು ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳಿಗೆ ಸ್ಥಳಾಂತರಿಸಲು ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನನ್ವಯ 10 ಅಂಶಗಳ ಪಟ್ಟಿ, ಜಾನುವಾರು ಘಟಕಗಳ ವಿವರ ಸ್ಥಳಾಂತರಿಸಬೇಕಾದ ಹುದ್ದೆಗಳ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು
15 SEP 2023
10864

| ಕ್ರ. ಸಂ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯ ಸಂಸ್ಥೆಯ ಸ್ಥಳ | ಜಾನುವಾರು ಘಟಕಗಳ ಸಂಖ್ಯೆ | ಸ್ಥಳಾಂತರಿಸ ಬೇಕಾದ ಸ್ಥಳ | ಒಳ ಪಡುವ ಒಟ್ಟು ಗ್ರಾಮಗಳ ಸಂಖ್ಯೆ | ಸ್ಥಳಾಂತರಿಸ ಲಾಗುತ್ತಿರುವ ಸ್ಥಳಗಳಲ್ಲಿನ ಒಟ್ಟು ಜಾನುವಾರು ಘಟಕಗಳ ಸಂಖ್ಯೆ |
|---|---|---|---|---|---|
| 01 | ಪಶುಚಿಕಿತ್ಸಾಲಯ ಚಾಮುಂಡಿ ಬೆಟ್ಟದ ತಪ್ಪಲು ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | 872 | ಸರ್ಕಾರಿ ಉತ್ತನಹಳ್ಳಿ, ವರುಣ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | 07 | 3099 |
| 02 | ಪಶುಚಿಕಿತ್ಸಾಲಯ ಪಡುವಾರಹಳ್ಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | 282 | ಎಸ್. ಕಲ್ಲಹಳ್ಳಿ, ಜಯಪುರ ಹೋಬಳಿ ಮೈಸೂರು ತಾ: & ಜಿಲ್ಲೆ | 04 | 1816 |
| 03 | ಪಶುಚಿಕಿತ್ಸಾಲಯ ಇಟ್ಟಿಗೆಗೂಡು ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | 1257 | ಡಿ.ಸಾಲುಂಡಿ, ಜಯಪುರ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | 05 | 3634 |

ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮೈಸೂರು ಜಿಲ್ಲೆ ಇವರು ಪ್ರಸ್ತಾವನೆಯಲ್ಲಿ ಕೋರಿರುವಂತೆ ಹಾಗೂ ಮೇಲಿನ ಪಟ್ಟಿಯಲ್ಲಿ ವಿವರಿಸಲಾದಂತೆ, ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳನ್ನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಮೇತ ಸ್ಥಳಾಂತರಿಸಬಹುದಾಗಿದೆ ಎಂದು

ಶಿಫಾರಸ್ಸು ಮಾಡಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ ಇ-97 ಪಸಸೇ 2023,</u>**
**<u>ಬೆಂಗಳೂರು ದಿನಾಂಕ:13.09.2023</u>**

ಪ್ರಸ್ತಾವನೆಯಲ್ಲಿನ ವಿವರಗಳ ಹಿನ್ನಲೆಯಲ್ಲಿ ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಮೈಸೂರು ಜಿಲ್ಲೆ ಇವರು ನೀಡಿರುವ ಅಭಿಪ್ರಾಯದ ಮೇರೆಗೆ ಮತ್ತು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಶಿಫಾರಸ್ಸಿನ ಮೇರೆಗೆ ರೈತರ ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ವಿವರಿಸಲಾದಂತೆ **<u>ಕಾಲಂ-2</u>** ರಲ್ಲಿ ತೋರಿಸಲಾಗಿರುವ ಪಶುವೈದ್ಯ ಸಂಸ್ಥೆಗಳನ್ನು ಪ್ರಸ್ತುತ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಸಮೇತ **<u>ಕಾಲಂ-3</u>** ರಲ್ಲಿ ನಮೂದಿಸಿರುವ ಸ್ಥಳಗಳಿಗೆ ಮುಂದಿನ ಆದೇಶದವರೆಗೂ ಸ್ಥಳಾಂತರಿಸಿ ಆದೇಶಿಸಿದೆ.

| ಕ್ರ. ಸಂ | ಪಶುವೈದ್ಯ ಸಂಸ್ಥೆಯು ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಸ್ಥಳಾಂತರಿಸಲಾದ ಸ್ಥಳ |
|---|---|---|
| 1 | 2 | 3 |
| 1 | ಪಶುಚಿಕಿತ್ಸಾಲಯ ಚಾಮುಂಡಿ ಬೆಟ್ಟದ ತಪ್ಪಲು ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | ಸರ್ಕಾರಿ ಉತ್ತನಹಳ್ಳಿ, ವರುಣ ಹೋಬಳಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ |
| 2 | ಪಶುಚಿಕಿತ್ಸಾಲಯ ಇಟ್ಟಿಗೆಗೂಡು ಮೈಸೂರು ತಾಲ್ಲೂಕು ಮತ್ತು ಜಿಲ್ಲೆ | ಹಿಟ್ನೆ ಹೆಬ್ಬಾಗಿಲು ಗ್ರಾಮ, ಪಿರಿಯಾ ಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
13/9/23
(ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)
13/9/23

<u>ಗೆ:</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಪಾರ್ಕ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ-5329, ಬೆಂಗಳೂರು-560001.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
4. ಜಂಟಿ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು
5. ಎಲ್ಲಾ ಅಪರ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
6. ಎಲ್ಲಾ ಜಂಟಿ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
7. ಎಲ್ಲಾ ಉಪ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.

(5–7) ಆಯುಕ್ತರ ಮುಖಾಂತರ

8. ಎಲ್ಲಾ ಉಪ ನಿರ್ದೇಶಕರು, ಸೂಪರ್ ಸ್ಪೆಷಾಲಿಟ ಆಸ್ಪತ್ರೆ, ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಜಿಲ್ಲಾ ಪಾಲಿ ಕ್ಲಿನಿಕ್, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
9. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಬೆಂಗಳೂರು.
10. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಉಪನಿರ್ದೇಶಕರು, ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
12. ಹೆಚ್ಚುವರಿ ನಿರ್ದೇಶಕರು ಹಾಗೂ ಕಾರ್ಯಕಾರಿ ಮುಖ್ಯಸ್ಥರು, ಖಜಾನೆ-2, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560009
13. ಸಂಬಂಧಪಟ್ಟ ಎಲ್ಲಾ ನೌಕರರಿಗೆ/ಸಿಬ್ಬಂದಿಗಳಿಗೆ **(ಆಯುಕ್ತರ ಮುಖಾಂತರ)**
14. ಕಂಟ್ರೋಲ್ ರೂಮ್-ಕಂ-24*7, ಹೆಲ್ಪ್ ಲೈನ್ (ಸಹಾಯವಾಣಿ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ.

**ಪ್ರತಿ,**

1. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಶಾಖಾ ರಕ್ಷಾ ಕಡತ

ಪತ್ರ ಸಂಖ್ಯೆ:ಆಪಸಂ:ಡಿವಿಡಿ-3:ವಿವ- :ಪಚಿಸ್ಥ:2020-21 ದಿನಾಂಕ:25.09.2023

<u>ಹಿಂಬರಹ</u>

ಈ ಪ್ರತಿಯನ್ನು ಉಪನಿರ್ದೇಶಕರು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು ಇವರಿಗೆ ಕಳುಹಿಸುತ್ತಾ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ: ಇ-97 ಪಸಸೇ 2023, ಬೆಂಗಳೂರು ದಿನಾಂಕ:13.09.2023ರ ಆದೇಶದಂತೆ ಕ್ರಮವಹಿಸಲು ಸೂಚಿಸಿದೆ.

ಸ್ಥಳ:ಬೆಂಗಳೂರು

ಅಪರ ನಿರ್ದೇಶಕರು (ಅಭಿವೃದ್ಧಿ)
ಪಶುಪಾಲನಾ ಮತ್ತು ಪಶುವೈದ್ಯಕೀ ಸೇವಾ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಪಶುವೈದ್ಯ ಸಂಸ್ಥೆಗಳನ್ನು ಹುದ್ದೆಗಳ ಸಮೇತ ಪಶುವೈದ್ಯ ಸಂಸ್ಥೆ ಹೆಚ್ಚು ಅವಶ್ಯವಿರುವ ರಾಜ್ಯದಲ್ಲಿನ ಇತರೆ ಸ್ಥಳಗಳಿಗೆ ಸ್ಥಳಾಂತರಿಸುವ ಕುರಿತು.

**ಓದಲಾಗಿದೆ:-** ಇ-ಆಫೀಸ್ ಕಡತ ಸಂಖ್ಯೆ:CAHVS-DEV0VIS/14/2023-DEVCAH-COMM AHVS

**ಪ್ರಸ್ತಾವನೆ:-**

ಮೇಲೆ ಓದಲಾದ ಇ-ಆಫೀಸ್ ಕಡತದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ರಾಜ್ಯದಲ್ಲಿ ಒಟ್ಟು 4234 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಸೂಪರ್‌ಸ್ಪೆಷಾಲಿಟಿ ಪಶುಆಸ್ಪತ್ರೆ-01, ಸ್ಪೆಷಾಲಿಟಿ ಪಶುಆಸ್ಪತ್ರೆ-04, ಪಾಲಿಕ್ಲಿನಿಕ್-27, ಪಶುಆಸ್ಪತ್ರೆ-665, ಪಶುಚಿಕಿತ್ಸಾಲಯ-2156, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ-1205 ಮತ್ತು ಸಂಚಾರಿ ಪಶುಚಿಕಿತ್ಸಾಲಯ-176 ಪಶುವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಸದರಿ ಪಶುವೈದ್ಯ ಸಂಸ್ಥೆಗಳ ಪೈಕಿ ಈ ಕೆಳಕಂಡ ಪಟ್ಟಿಯಲ್ಲಿ ವಿವರಿಸಲಾದಂತೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 101 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ 103 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ಆಯುಕ್ತರು ತಿಳಿಸಿರುತ್ತಾರೆ.

| ಕ್ರ. ಸಂ | ಸಂಸ್ಥೆಯ ಹೆಸರು | ಒಟ್ಟು | |
|---|---|---|---|
| | | ಬೆಂಗಳೂರು ನಗರ | ಬೆಂಗಳೂರು ಗ್ರಾಮಾಂತರ |
| 1 | ಸೂಪರ್ ಸ್ಪೆಷಾಲಿಟಿ ಪಶುಆಸ್ಪತ್ರೆ | 01 | 0 |
| 2 | ಸ್ಪೆಷಾಲಿಟಿ ಪಶುಆಸ್ಪತ್ರೆ | 0 | 0 |
| 3 | ಪಾಲಿಕ್ಲಿನಿಕ್ | 0 | 01 |
| 4 | ಪಶುಆಸ್ಪತ್ರೆಗಳು | 19 | 13 |
| 5 | ಪಶುಚಿಕಿತ್ಸಾಲಯಗಳು | 58 | 61 |
| 6 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ | 19 | 24 |
| 7 | ಸಂಚಾರಿ ಪಶುಚಿಕಿತ್ಸಾಲಯಗಳು | 04 | 04 |
| | **ಒಟ್ಟು** | **101** | **103** |

ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಪ್ರತಿ 5000 ಜಾನುವಾರು ಘಟಕಗಳಿಗೆ 01 ಪಶುವೈದ್ಯಕೀಯ ಸಂಸ್ಥೆ ಇರಬೇಕಾಗಿರುತ್ತದೆ. ಅದರಂತೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಜಾನುವಾರು ಘಟಕಗಳ ಸಂಖ್ಯೆ 1000 ಕ್ಕಿಂತ ಕಡಿಮೆ ಇರುವ 24 ಪಶುವೈದ್ಯ ಸಂಸ್ಥೆಗಳು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಜಾನುವಾರು ಘಟಕಗಳ ಸಂಖ್ಯೆ 1000 ಕ್ಕಿಂತ ಕಡಿಮೆ 04 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ1000 ಮತ್ತು ಅದಕ್ಕಿಂತ ಕಡಿಮೆ ಜಾನುವಾರು ಘಟಕಗಳನ್ನು

ಹೊಂದಿರುವ ಒಟ್ಟು 28 ಪಶುವೈದ್ಯ ಸಂಸ್ಥೆಗಳನ್ನು ಅವಶ್ಯಕತೆ/ಬೇಡಿಕೆ ಇರುವ ಸ್ಥಳಗಳಿಗೆ ರಾಜ್ಯದಲ್ಲಿನ ಇತರೆ ಸ್ಥಳಗಳಿಗೆ ಸ್ಥಳಾಂತರಿಸಬಹುದಾಗಿದೆ ಎಂದು ಅಭಿಪ್ರಾಯಿಸಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ. ರಾಜ್ಯದಲ್ಲಿ ಪ್ರಸ್ತುತ ಸೂಪರ್ ಸ್ಪೆಷಾಲಿಟಿ ಪಶು ಆಸ್ಪತ್ರೆ, ಸ್ಪೆಷಾಲಿಟಿ ಪಶು ಆಸ್ಪತ್ರೆ, ಪಾಲಿಕ್ಲಿನಿಕ್, ಪಶು ಆಸ್ಪತ್ರೆ, ಪಶುಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಮತ್ತು ಸಂಚಾರಿ ಪಶುಚಿಕಿತ್ಸಾಲಯಗಳು ಸೇರಿದಂತೆ ಒಟ್ಟು 4234 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯಕೀಯ ಸಂಸ್ಥೆ ಇರಬೇಕಾಗುತ್ತದೆ. ಆದರೆ, ರಾಜ್ಯದಲ್ಲಿ ಈ ಪ್ರಮಾಣಕ್ಕನುಗುಣವಾಗಿ ಪಶುವೈದ್ಯಕೀಯ ಸಂಸ್ಥೆಗಳು ಸ್ಥಾಪಿತವಾಗಿರುವುದಿಲ್ಲ. ಹೀಗಾಗಿ ಗ್ರಾಮಾಂತರ ಪ್ರದೇಶದ ಜಾನುವಾರುಗಳಿಗೆ ಸಮರ್ಪಕವಾಗಿ ಚಿಕಿತ್ಸೆಯನ್ನು ಒದಗಿಸುವಲ್ಲಿ ಅಡಚಣೆ ಉಂಟಾಗಿರುವುದನ್ನು ತೀವ್ರವಾಗಿ ಗಮನಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಜಾನುವಾರು ಘಟಕಗಳು ಹಾಗೂ ಪಶುವೈದ್ಯಕೀಯ ಸಂಸ್ಥೆಗಳಿಗೆ ಹೋಲಿಸಿದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಅನುಪಾತ ಸಂಖ್ಯೆಯಲ್ಲಿ ಹೆಚ್ಚಿನ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಹಲವಾರು ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರಗಳಿಗೆ ಜಾನುವಾರುಗಳ ಸಂಖ್ಯೆಗನುಗುಣವಾಗಿ ಪಶುಚಿಕಿತ್ಸಾಲಯಗಳು ಇಲ್ಲದೆ ಇರುವುದರಿಂದ ಪಶುವೈದ್ಯಕೀಯ ಸಂಸ್ಥೆಗಳನ್ನು ಮಂಜೂರು ಮಾಡುವಂತೆ ಕೋರಿ ಮನವಿಗಳನ್ನು ಸಲ್ಲಿಸಿರುತ್ತಾರೆ. ಸದ್ಯದ ಪರಿಸ್ಥಿತಿಯಲ್ಲಿ ಹೊಸದಾಗಿ ಪಶುವೈದ್ಯಕೀಯ ಸಂಸ್ಥೆಗಳನ್ನು ಮಂಜೂರು ಮಾಡುವ ಪ್ರಸ್ತಾಪ ಇಲಾಖೆಯ ಮುಂದೆ ಇರುವುದಿಲ್ಲ.

ಆದುದರಿಂದ, ಬೆಂಗಳೂರು ನಗರ ಜಿಲ್ಲೆಯಲ್ಲಿ 1300 ಕ್ಕಿಂತ ಕಡಿಮೆ ಇರುವ ಜಾನುವಾರು ಘಟಕಗಳ ಪಶುವೈದ್ಯಕೀಯ ಸಂಸ್ಥೆಗಳನ್ನು ರಾಷ್ಟ್ರೀಯ ಕೃಷಿ ಆಯೋಗದ ಮಾರ್ಗಸೂಚಿಯನ್ವಯ ಹಾಗೂ ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಜಾನುವಾರು ಘಟಕಗಳ ಸಂಖ್ಯೆ ಹೆಚ್ಚಿರುವ ಹಾಗೂ ಪಶುವೈದ್ಯ ಸಂಸ್ಥೆ ಹೆಚ್ಚು ಅವಶ್ಯವಿರುವ ರಾಜ್ಯದ ವಿವಿಧ ಸ್ಥಳಗಳಿಗೆ ಹುದ್ದೆಗಳ ಸಮೇತ ಸ್ಥಳಾಂತರಿಸುವುದು ಅನಿವಾರ್ಯ ಕ್ರಮವಾಗಿರುತ್ತದೆ. ಅದರಂತೆ, ಸ್ಥಳಾಂತರಗೊಳ್ಳುವ ಸಂಸ್ಥೆಗಳ ವ್ಯಾಪ್ತಿಯನ್ನು ಆಯಾ ಸಂಸ್ಥೆಗಳ ಅಕ್ಕ-ಪಕ್ಕದಲ್ಲಿನ ಸಂಸ್ಥೆಗಳಿಗೆ ವಿಸ್ತರಿಸುವ ಮೂಲಕ ಪಶುಚಿಕಿತ್ಸಾ ಸೇವೆಯನ್ನು ಒದಗಿಸಲು ಸರಿ ಹೊಂದಿಸಿಕೊಳ್ಳಬಹುದಾಗಿದೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿನ ಜಾನುವಾರು ಘಟಕಗಳ ಸಂಖ್ಯೆ 1300 ಕ್ಕಿಂತ ಕಡಿಮೆ ಇರುವ ಪಶುವೈದ್ಯಕೀಯ ಸಂಸ್ಥೆಗಳನ್ನು ಜಾನುವಾರು ಘಟಕಗಳ ಸಂಖ್ಯೆ ಹೆಚ್ಚಿರುವ ಹಾಗೂ ಪಶುವೈದ್ಯ ಸಂಸ್ಥೆ ಹೆಚ್ಚು ಅವಶ್ಯವಿರುವ ರಾಜ್ಯದ ವಿವಿಧ ಸ್ಥಳಗಳಿಗೆ ಹುದ್ದೆಗಳ ಸಮೇತ ಸ್ಥಳಾಂತರಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಪಸಂಮೀಇ-161 ಪಸಸೇ 2023,**
**ಬೆಂಗಳೂರು, ದಿನಾಂಕ:15.12.2023.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಜಾನುವಾರು ಘಟಕಗಳ ಸಂಖ್ಯೆ 1300 ಕ್ಕಿಂತ ಕಡಿಮೆ ಇರುವ ಪಶುವೈದ್ಯಕೀಯ ಸಂಸ್ಥೆಗಳನ್ನು ರಾಷ್ಟ್ರೀಯ ಕೃಷಿ ಆಯೋಗದ ಸೂಚಿಯನ್ವಯ ಹಾಗೂ ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಲ್ಲಿನ ಹುದ್ದೆಗಳ ಸಮೇತ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೂ ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ** ದಲ್ಲಿ ವಿವರಿಸಿರುವಂತೆ ಜಾನುವಾರು ಘಟಕಗಳ ಸಂಖ್ಯೆ ಹೆಚ್ಚಿರುವ ಹಾಗೂ ಪಶುವೈದ್ಯ ಸಂಸ್ಥೆ ಹೆಚ್ಚು ಅವಶ್ಯವಿರುವ ರಾಜ್ಯದ ವಿವಿಧ ಸ್ಥಳಗಳಿಗೆ ಸ್ಥಳಾಂತರಿಸಿ ಆದೇಶಿಸಿದೆ.

ಮುಂದುವರೆದು, ಸ್ಥಳಾಂತರಗೊಳ್ಳುವ ಪಶುವೈದ್ಯಕೀಯ ಸಂಸ್ಥೆಗಳು ಸುಸೂತ್ರವಾಗಿ ಕಾರ್ಯನಿರ್ವಹಿಸಲು ಹಾಗೂ ತ್ವರಿತವಾಗಿ ಕಾರ್ಯಾರಂಭ ಮಾಡುವ ಹಿತದೃಷ್ಟಿಯಿಂದ ಸದರಿ ಸಂಸ್ಥೆಗಳಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೂಡಲೇ ಅಗತ್ಯ ಕ್ರಮವಹಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15/12/23
(ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)
15/12/23

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಪಾರ್ಕ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ-5329, ಬೆಂಗಳೂರು-560001.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
4. ಜಂಟಿ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು
5. ಎಲ್ಲಾ ಅಪರ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
6. ಎಲ್ಲಾ ಜಂಟಿ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
7. ಎಲ್ಲಾ ಉಪ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
8. ಎಲ್ಲಾ ಉಪ ನಿರ್ದೇಶಕರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಜಿಲ್ಲಾ ಪಾಲಿ ಕ್ಲಿನಿಕ್, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.

(5–8: ಆಯುಕ್ತರ ಮುಖಾಂತರ)

9. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಬೆಂಗಳೂರು.
10. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಉಪನಿರ್ದೇಶಕರು, ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.

12. ಹೆಚ್ಚುವರಿ ನಿರ್ದೇಶಕರು ಹಾಗೂ ಕಾರ್ಯಕಾರಿ ಮುಖ್ಯಸ್ಥರು, ಖಜಾನೆ-2, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560009.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
14. ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ **(ಆಯುಕ್ತರ ಮುಖಾಂತರ)**
15. ಕಂಟ್ರೋಲ್ ರೂಮ್-ಕಂ-24*7, ಹೆಲ್ಪ್ ಲೈನ್ (ಸಹಾಯವಾಣಿ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ.

ಪ್ರತಿ,

1. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಶಾಖಾ ರಕ್ಷಾ ಕಡತ.

## ಅನುಬಂಧ

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಸ್ಥಳಾಂತರಗೊಳ್ಳುವ ಪಶುವೈದ್ಯ ಸಂಸ್ಥೆಯ ಹೆಸರು ಮತ್ತು ಸ್ಥಳ | ಪಶುವೈದ್ಯ ಸಂಸ್ಥೆಯನ್ನು ಸ್ಥಳಾಂತರ ಗೊಳಿಸಲಾದ ಸ್ಥಳ |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು ನಗರ ಜಿಲ್ಲೆ | ಬೆಂಗಳೂರು ದಕ್ಷಿಣ | ಪ್ರಾ.ಪ.ಚಿ.ಕೇಂದ್ರ, ತಲಘಟ್ಟಪುರ | ಸೂಲಿಕೆರೆ, ಬೆಂಗಳೂರು ದಕ್ಷಿಣ ತಾ:, ಬೆಂಗಳೂರು ನಗರ ಜಿ: |
| 2 | | | ಪ.ಚಿ., ಬ್ಯಾಟರಾಯನಪುರ | ಯರೇಹಳ್ಳಿ, ಮಾಗಡಿ ತಾ:, ರಾಮನಗರ ಜಿ: |
| 3 | | | ಪಶು ಆಸ್ಪತ್ರೆ, ಜಯನಗರ | ಸೋಮಹಳ್ಳಿ, ಗುಂಡ್ಲುಪೇಟೆ ತಾ:, ಚಾಮರಾಜನಗರ ಜಿ: |
| 4 | | | ಪ್ರಾ.ಪ.ಚಿ.ಕೇಂದ್ರ, ಕೋಣನಕುಂಟೆ | ತುರಕರಶೀಗಿಹಳ್ಳಿ, ಬೈಲಹೊಂಗಲ ತಾ:, ಬೆಳಗಾವಿ ಜಿ: |
| 5 | | | ಪ್ರಾ.ಪ.ಚಿ.ಕೇಂದ್ರ, ಗೊಟ್ಟಿಗೆರೆ | ಹೊಸವಂಟಮುರಿ, ಯಮಕನಮರಡಿ ತಾ:, ಬೆಳಗಾವಿ ಜಿ: |
| 6 | | | ಪಶು ಚಿಕಿತ್ಸಾಲಯ, ಆಡುಗೋಡಿ | ರಾಮಾಪುರ, ಕಲಘಟಗಿ ತಾ: ಧಾರವಾಡ ಜಿ: |
| 7 | | | ಪ.ಚಿ., ದೊಮ್ಮಲೂರು. | ಗೋಪಾಲಪುರ,ಮೈಸೂರು ತಾ: ಮತ್ತು ಜಿ: |
| 8 | | | ಪಶು ಆಸ್ಪತ್ರೆ, ಉತ್ತರಹಳ್ಳಿ. | ಮರಳೇಬೆಕುಪ್ಪೆ,ಕನಕಪುರ ತಾ:, ರಾಮನಗರ ಜಿ: |
| 9 | | | ಪ.ಚಿ., ಬೈರತಿ. | ಕರಮುಡಿ, ಯಲಬುರ್ಗಾ ತಾ:, ಕೊಪ್ಪಳ ಜಿ: |
| 10 | | ಬೆಂಗಳೂರು ಪೂರ್ವ | ಪ.ಚಿ.,, ಕಲ್ಕೆರೆ. | ದಿದ್ದಿಗಿ, ಸಿಂದ ನೂರು ತಾ:,ರಾಯಚೂರು ಜಿ: |
| 11 | | | ಪ.ಚಿ., ಕೆ.ನಾರಾಯಣಪುರ | ಕೆ.ಆರ್.ಹಳ್ಳಿ,ಹಿರಿಯೂರು ತಾ:,ಚಿತ್ರದುರ್ಗ ಜಿ: |
| 12 | | | ಪ.ಚಿ., ಗುಂಜೂರು. | ಎಂ.ಶೆಟ್ಟಿಹಳ್ಳಿ, ಪಿರಿಯಾಪಟ್ಟಣ ತಾ:, ಮೈಸೂರು ಜಿ: |
| 13 | | | ಪ.ಚಿ.,ಹಾಲನಾಯಕನ ಹಳ್ಳಿ | ಆಲನಾಥ, ಕೋಡಿಹಳ್ಳಿ ಹೋಬಳಿ, ಕನಕಪುರ ತಾ:, ರಾಮನಗರ ಜಿ: |
| 14 | | | ಪ.ಚಿ., ಕಾಡುಸೊಣ್ಣಪ್ಪನಹಳ್ಳಿ | ಲಕ್ಯಾ, ಚಿಕ್ಕಮಗಳೂರು ತಾ: ಮತ್ತು ಜಿ: |
| 15 | | | ಪ್ರಾ.ಪ.ಚಿ.ಕೇಂದ್ರ, ತರಹುಣಸೆ | ಡಿಂಕಾ, ಪಾಂಡವಪುರ ತಾ:, ಮಂಡ್ಯ ಜಿ: |
| 16 | | | ಪ.ಚಿ., ಗಂಟಿಗಾನಹಳ್ಳಿ | ಚಿದರಹಳ್ಳಿ, ಟಿ.ನರಸಿಪುರ ತಾ,ಮೈಸೂರು ಜಿ: |
| 17 | | | ಪ್ರಾ.ಪ.ಚಿ.ಕೇಂದ್ರ, ಚಿದರಹಳ್ಳಿ, ಟಿ.ನರಸಿಪುರ ತಾ:,ಮೈಸೂರು ಜಿ: | ಯಾಚೇನಹಳ್ಳಿ, ಟಿ.ನರಸಿಪುರ ತಾ:, ಮೈಸೂರು ಜಿ: |
| 18 | | | ಪ.ಚಿ., ಲಿಂಗನಹಳ್ಳಿ | ಮಾಯಗಾನಹಳ್ಳಿ ವೃತ್ತ, ಕಸಬಾ ಹೋಬಳಿ, ನಾಗಮಂಗಲ ತಾ:, ಮಂಡ್ಯ ಜಿ: |
| 19 | | | ಪ.ಚಿ., ಹನಿಯೂರು | ಕೆಂಪಿಸಿದ್ದನಹುಂಡಿ, ನಂಜನಗೂಡು ತಾ, ಮೈಸೂರು ಜಿ: |
| 20 | | | ಪ.ಚಿ., ಜಾಲಹಳ್ಳಿ | ಕೊಡಮಗ್ಗಿ, ರಟ್ಟಿಹಳ್ಳಿ ತಾ:, ಹಾವೇರಿ ಜಿ: |
| 21 | | | ಪ.ಚಿ., ಮಾದಪ್ಪನಹಳ್ಳಿ | ದೊಡ್ಡಬ್ಯಾಲಾಳು, ಪಿರಿಯಾಪಟ್ಟಣ ತಾ:, ಮೈಸೂರು ಜಿ: |
| 22 | | | ಪ್ರಾ.ಪ.ಚಿ.ಕೇಂದ್ರ, ಹಂಡೇನಹಳ್ಳಿ | ಲಂಜವಾಡ್, ಬೀದರ್ ತಾ: ಮತ್ತು ಜಿ: |

| | | | | |
|---|---|---|---|---|
| 23 | | | ಪ್ರಾ.ಪ.ಚಿ.ಕೇಂದ್ರ ದೇವಸಂದ್ರ | ಹೆಬ್ಬೂರು. ಟಿ.ನರಸೀಪುರ ತಾ. ಮೈಸೂರು ಜಿಲ್ಲೆ. |
| 24 | | ಆನೇಕಲ್ | ಪ್ರಾ.ಪ.ಚಿ.ಕೇಂದ್ರ, ಬಿದರಗುಪ್ಪೆ | ಆನೆಗುದ್ದಿ, ರಾಮದುರ್ಗ ತಾ:, ಬೆಳಗಾವಿ ಜಿ: |
| 25 | | | ಪ್ರಾ.ಪ.ಚಿ.ಕೇಂದ್ರ, ಸಾಮಂದೂರು | ಹೊಸಯರಗುಡಿ, ಬಳ್ಳಾರಿ ತಾ: ಮತ್ತು ಜಿ: |
| 26 | | | ಪ್ರಾ.ಪ.ಚಿ.ಕೇಂದ್ರ, ದೊಡ್ಡೇರಿ, ಬೆಂಗಳೂರು ದಕ್ಷಿಣ ತಾ: | ಜೋಡಿಹೊಸಹಳ್ಳಿ,, ಉತ್ತರಿದುರ್ಗ ಹೋಬಳಿ, ಕುಣಿಗಲ್ ತಾ:, ತುಮಕೂರು ಜಿ: |
| 27 | | ಬೆಂಗಳೂರು ಉತ್ತರ | ಪಶುಚಿಕಿತ್ಸಾಲಯ ಪ್ರಕಾಶನಗರ, ಬೆಂಗಳೂರು ಉತ್ತರ | ಕಾಡಜ್ಜಿ, ದಾವಣಗೆರೆ ತಾ: ಮತ್ತು ಜಿಲ್ಲೆ |

(ಶರಣಬಸಪ್ಪ) 15/12/23
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)
15/12/23

P-285

6649020
11/10/23

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಬೆಳಗಾವಿಯ ಮಹಾಂತೇಶ ನಗರದಲ್ಲಿನ ಪಶುಚಿಕಿತ್ಸಾಲಯವನ್ನು ಅಲ್ಲಿನ ಹುದ್ದೆಗಳ ಸಮೇತ ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕಿನ ಮುಚ್ಚಂಡಿ ಗ್ರಾಮಕ್ಕೆ ಸ್ಥಳಾಂತರಿಸುವ ಕುರಿತು

**ಓದಲಾಗಿದೆ:-**
1. ಇ-ಆಫೀಸ್ ಕಡತ ಸಂಖ್ಯೆ: CAHVS-DEV0VIS/13/2022-DEVCAH-COMM AHVS
2. ಪತ್ರ ಸಂಖ್ಯೆ:ಉನಿಬೆ/ಪಚಿಸ್ಥ/2023-24 ದಿನಾಂಕ:15.07.2023

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ... ಬೆಂಗಳೂರು-24
2023
11990
ಸಂಖ್ಯೆ:

ಜಂಟಿ ನಿರ್ದೇಶಕರು (ಆಡಳಿತ)

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ (1) ರ ಇ-ಆಫೀಸ್ ಕಡತದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಮಾನ್ಯ ಲೋಕೋಪಯೋಗಿ ಸಚಿವರು ದಿನಾಂಕ:16.07.2023 ರ ನಡವಳಿಯಲ್ಲಿ ಬೆಳಗಾವಿ ನಗರದ ಮಹಾಂತೇಶ ನಗರದಲ್ಲಿ ಪ್ರಸ್ತುತ ಪಶುಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದ್ದು, ಇದೇ ಅವರಣದಲ್ಲಿ ದಿನಾಂಕ:01.08.2022 ರಂದು ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದ್ದು, ಒಂದೇ ಅವರಣದಲ್ಲಿ 02 ಪಶುವೈದ್ಯ ಸಂಸ್ಥೆಗಳು ಇರುವುದರಿಂದ ಮುಚ್ಚಂಡಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಪಶುಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲು ಅನುಕೂಲವಾಗುವಂತೆ ಮಹಾಂತೇಶ ನಗರದ ಪಶುಚಿಕಿತ್ಸಾಲಯವನ್ನು ಯಮಕನಮರಡಿ ಮತಕ್ಷೇತ್ರದ ಬೆಳಗಾವಿ ತಾಲ್ಲೂಕಿನ ಮುಚ್ಚಂಡಿ ಗ್ರಾಮಕ್ಕೆ ಸ್ಥಳಾಂತರಿಸುವಂತೆ ಕೋರಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ ಕ್ರ.ಸಂ (2) ರ ಪತ್ರದಲ್ಲಿ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಳಗಾವಿ ಜಿಲ್ಲೆ ಇವರು ಬೆಳಗಾವಿ ತಾಲ್ಲೂಕಿನ ಮುಚ್ಚಂಡಿ ಗ್ರಾಮದ 8 ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಕಣಬರಗಿ, ಅಷ್ಟೇ ಮತ್ತು ಕಲಕಾಂಬ ಗ್ರಾಮಗಳು ಬರುವುದರಿಂದ, ಗ್ರಾಮ ಪಂಚಾಯತ್ ಮುಚ್ಚಂಡಿ, ಬೆಳಗಾವಿ ತಾಲ್ಲೂಕು ಇವರು 10 ಅಂಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಕಟ್ಟಡ, ವಸತಿ ಗೃಹ, ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲು ಒಪ್ಪಿರುವುದರಿಂದ ಹಾಗೂ ಬೆಳಗಾವಿ ನಗರದ ಮಹಾಂತೇಶ ನಗರದಲ್ಲಿ ಈಗಾಗಲೇ ನೂತನವಾಗಿ ಸ್ಪೇಷಾಲಿಟಿ ಪಶುಆಸ್ಪತ್ರೆ ಪ್ರಾರಂಭವಾಗಿರುವುದರಿಂದ ಬೆಳಗಾವಿಯ ಮಹಾಂತೇಶ ನಗರ ಪಶುಚಿಕಿತ್ಸಾಲಯವನ್ನು ಬೆಳಗಾವಿ ತಾಲ್ಲೂಕಿನ ಮುಚ್ಚಂಡಿ ಗ್ರಾಮಕ್ಕೆ ಹುದ್ದೆಗಳ ಸಮೇತ ಸ್ಥಳಾಂತರಿಸಬಹುದಾಗಿದೆ ಎಂದು ತಮ್ಮ ಅಭಿಪ್ರಾಯದೊಂದಿಗೆ ಹಾಗೂ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ ಎಂದು ಆಯುಕ್ತರು ತಿಳಿಸಿರುತ್ತಾರೆ.

ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಕೋರಿರುವಂತೆ ಹಾಗೂ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಳಗಾವಿ ಜಿಲ್ಲೆ ಇವರು ನೀಡಿರುವ ಅಭಿಪ್ರಾಯದಂತೆ ಬೆಳಗಾವಿಯ ಮಹಾಂತೇಶ ನಗರ ಪಶುಚಿಕಿತ್ಸಾಲಯವನ್ನು ಬೆಳಗಾವಿ ತಾಲ್ಲೂಕಿನ ಮುಚ್ಚಂಡಿ ಗ್ರಾಮಕ್ಕೆ ಹುದ್ದೆಗಳ

ಸಮೇತ ಸ್ಥಳಾಂತರಿಸಬಹುದಾಗಿದೆ ಎಂದು ಶಿಫಾರಸ್ಸು ಮಾಡಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಆಯುಕ್ತರ ಪ್ರಸ್ತಾವನೆಯನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ ಇ-92 ಪಸಸೇ 2023,**
**ಬೆಂಗಳೂರು, ದಿನಾಂಕ:05.10.2023.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ರೈತರು ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಅಡಿಯಲ್ಲಿನ ಬೆಳಗಾವಿಯ ಮಹಾಂತೇಶ ನಗರ ಪಶುಚಿಕಿತ್ಸಾಲಯವನ್ನು ಅಲ್ಲಿನ ಹುದ್ದೆಗಳ ಸಮೇತ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೂ ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕಿನ ಮುಚ್ಚಂಡಿ ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
05/10/23
(ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)
05/10/23

ಇವರಿಗೆ:-

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ-5329, ಬೆಂಗಳೂರು-560001.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು
4. ಜಂಟಿ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5. ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾವಿ ಜಿಲ್ಲೆ.
6. ಉಪನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಳಗಾವಿ ಜಿಲ್ಲೆ.
7. ಹೆಚ್ಚುವರಿ ನಿರ್ದೇಶಕರು ಹಾಗೂ ಕಾರ್ಯಕಾರಿ ಮುಖ್ಯಸ್ಥರು, ಖಜಾನೆ-2, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560009
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ವೆಚ್ಚ-4, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

ಪ್ರತಿ,

1. ಮಾನ್ಯ ಪಶುಸಂಗೋಪನಾ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿ.

14.600

# ಕರ್ನಾಟಕ ಸರ್ಕಾರದ ನಡವಳಿಗಳು

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು-24
01 DEC
ಸಂಖ್ಯೆ : 15071

**ವಿಷಯ:-** ಬೆಂಗಳೂರು ನಗರ ಜಿಲ್ಲೆಯ, ಪೂರ್ವ ತಾಲ್ಲೂಕಿನ ಥಣಿಸಂದ್ರ ಪಶುಚಿಕಿತ್ಸಾಲಯವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮಕ್ಕೆ ಸ್ಥಳಾಂತರ ಮಾಡುವ ಬಗ್ಗೆ.

**ಓದಲಾಗಿದೆ:-**
1. ಪತ್ರ ಸಂಖ್ಯೆ: ಆಪಸಂ/ಡಿವಿಡಿ-3/ವಿವ-14: ಪವೈಸಂಸ್ಥೆ/2023, ದಿನಾಂಕ:27.10.2023
2. ಇ-ಆಫೀಸ್ ಕಡತ ಸಂಖ್ಯೆ: CAHVS-DEVOVIS/14/2023

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ (1) ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಮಾನ್ಯ ಉಪಮುಖ್ಯಮಂತ್ರಿಯವರ ಆಪ್ತಕಾರ್ಯದರ್ಶಿ ಇವರ ಟಿಪ್ಪಣಿ ಪತ್ರ ದಿನಾಂಕ:08.10.2023 ರಲ್ಲಿ ಡಾ.ಎಂ.ಲೀಲಾವತಿ ಮತ್ತು ವಿನೋದ್ ರಾಜ್, ಇವರುಗಳು ಸೋಲದೇವನಹಳ್ಳಿ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿನ ರೈತರು ಮತ್ತು ಜಾನುವಾರುಗಳು ಮತ್ತು ಸಾಕು ಪ್ರಾಣಿಗಳಿಗೆ ಸೂಕ್ತ ಚಿಕಿತ್ಸೆ ಮತ್ತು ಔಷದೋಪಚಾರ ನೀಡುವ ಉದ್ದೇಶದಿಂದ ಪಶುಚಿಕಿತ್ಸಾಲಯ ಕಟ್ಟಡವನ್ನು ನಿರ್ಮಾಣ ಮಾಡಿದ್ದು, ಎಲ್ಲಾ ಮೂಲಭೂತ ಸುಸಜ್ಜಿತ ಸೌಕರ್ಯಗಳನ್ನು ಒದಗಿಸಿ ಸರ್ಕಾರಕ್ಕೆ ಒಪ್ಪಿಸಲು ಸಿದ್ದರಿದ್ದು, ಸೋಲದೇವನಹಳ್ಳಿ ಗ್ರಾಮಕ್ಕೆ ಹೊಸದಾಗಿ ಪಶುಚಿಕಿತ್ಸಾಲಯವನ್ನು ಮಂಜೂರು ಮಾಡಿ ಬೆಂಗಳೂರು ನಗರ ಜಿಲ್ಲೆಯ ಒಂದು ಪಶುವೈದ್ಯ ಸಂಸ್ಥೆಯನ್ನು ಸ್ಥಳಾಂತರಿಸಲು ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ ಕ್ರ.ಸಂ (2) ರ ಕಡತದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಹಂತದ ಪಶುವೈದ್ಯ ಸಂಸ್ಥೆಗಳ 2020-21, 2021-22 ಮತ್ತು 2022-23 ನೇ ಸಾಲಿನ ಸರಾಸರಿ ದೈನಂದಿನ ಜಾನುವಾರು ಚಿಕಿತ್ಸಾ ವಿವರಗಳನ್ನು ಅನುಬಂಧ-1 ರಲ್ಲಿ ಹಾಗೂ ಸರಾಸರಿ ದೈನಂದಿನ 10ಕ್ಕಿಂತ ಕಡಿಮೆ ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಿರುವ ಪಶುವೈದ್ಯ ಸಂಸ್ಥೆಗಳ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿ ಈಗಾಗಲೇ ಸರ್ಕಾರದ ಅವಗಾಹನೆಗೆ ಸಲ್ಲಿಸಲಾಗಿದೆ. ಅದರಂತೆ ಬೆಂಗಳೂರು ನಗರ ಜಿಲ್ಲೆಯ ಒಂದು ಪಶುವೈದ್ಯ ಸಂಸ್ಥೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಲದೇವನಹಳ್ಳಿ ಗ್ರಾಮಕ್ಕೆ ಸ್ಥಳಾಂತರಿಸುವ ಕುರಿತು ಆದ್ಯತೆ ಮೇರೆಗೆ ಪರಿಗಣಿಸಬಹುದಾಗಿದೆ ಎಂದು ತಿಳಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಬೆಂಗಳೂರು ನಗರ ಜಿಲ್ಲೆಯ, ಪೂರ್ವ ತಾಲ್ಲೂಕಿನ ಥಣಿಸಂದ್ರ ಪಶುಚಿಕಿತ್ಸಾಲಯವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿ, ಅದರಂತೆ, ಈ ಕೆಳಕಂಡ ಆದೇಶ.

JD (Adm)
ನಿರ್ದೇಶಕರು
AD
Dev

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ ಇ-117 ಪಸಸೇ 2023,
ಬೆಂಗಳೂರು, ದಿನಾಂಕ:24.11.2023.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಡಾ.ಎಂ.ಲೀಲಾವತಿ ಮತ್ತು ವಿನೋದ್ ರಾಜ್, ಇವರುಗಳು ಸೋಲದೇವನಹಳ್ಳಿ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿನ ರೈತರು ಮತ್ತು ಜಾನುವಾರುಗಳು ಮತ್ತು ಸಾಕು ಪ್ರಾಣಿಗಳಗೆ ಸೂಕ್ತ ಚಿಕಿತ್ಸೆ ಮತ್ತು ಔಷದೋಪಚಾರ ನೀಡುವ ಉದ್ದೇಶದಿಂದ ಪಶುಚಿಕಿತ್ಸಾಲಯ ಕಟ್ಟಡವನ್ನು ನಿರ್ಮಾಣ ಮಾಡಿ, ಎಲ್ಲಾ ಮೂಲಭೂತ ಸುಸ್ಸಜ್ಜಿತ ಸೌಕರ್ಯಗಳನ್ನು ಒದಗಿಸಿ ಸರ್ಕಾರಕ್ಕೆ ಒಪ್ಪಿಸಲು ಸಿದ್ದರಿರುವ ಹಿನ್ನಲೆಯಲ್ಲಿ ರೈತರ ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಬೆಂಗಳೂರು ನಗರ ಜಿಲ್ಲೆಯ, ಪೂರ್ವ ತಾಲ್ಲೂಕಿನ ಥಣಿಸಂದ್ರ ಪಶುಚಿಕಿತ್ಸಾಲಯವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ಅಲ್ಲಿನ ಹುದ್ದೆಗಳ ಸಮೇತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/11/23

(ಶರಣಬಸಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

24/11/23

ಇವರಿಗೆ:-

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ-5329, ಬೆಂಗಳೂರು-560001.
2. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
6. ಜಂಟಿ ನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
7. ಉಪನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
8. ಉಪನಿರ್ದೇಶಕರು (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ.
9. ಸರ್ಕಾರದ ಅಧೀನ ಕಾರ್ಯದರ್ಶಿಗಳು, ವೆಚ್ಚ-4, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ **(ಆಯುಕ್ತರ ಮುಖಾಂತರ)**

ಪ್ರತಿ,

1. ಮಾನ್ಯ ಪಶುಸಂಗೋಪನೆ ರೇಷ್ಮೆ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.